ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ : DEPARTMENT / SUBJECT : [illegible]

ಪತ್ರಿಕೆಯ ಹೆಸರು : NAME OF THE NEWS PAPER : ಕನ್ನಡಪ್ರಭ ದಿನಾಂಕ : DATE : 27/9/2018

# ಬಡ್ತಿ ಮೀಸಲಿಗೆ ಸುಪ್ರೀಂ ಅಸ್ತು

## ಎಸ್ಸಿ, ಎಸ್ಟಿ ನೌಕರರ ಬಡ್ತಿ ರಾಜ್ಯಗಳ ವಿವೇಚನೆಗೆ ಹಿಂದುಳಿದ ಬಗ್ಗೆ ಸಮೀಕ್ಷೆಯ ನಿಯಮ ಸಡಿಲಿಕೆ

**ನವದೆಹಲಿ:** ಪರಿಶಿಷ್ಟಜಾತಿ, ಸಮುದಾಯದ ನೌಕರರಿಗೆ ಬಡ್ತಿಯಲ್ಲಿ ಮೀಸಲಾತಿ ನೀಡುವ ಕುರಿತು ಹಲವು ಷರತ್ತುಗಳನ್ನು ವಿಧಿಸಿ 2006ರಲ್ಲಿ ತಾನೇ ನೀಡಿದ್ದ ನೀಡಿದ್ದ ತೀರ್ಪನ್ನು ಸಪ್ತ ಸದಸ್ಯ ನ್ಯಾಯಪೀಠದಿಂದ ಮರುಪರಿಶೀಲನೆಗೆ ಒಳಪಡಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ. ಜೊತೆಗೆ, ಎಸ್‌ಸಿ–ಎಸ್‌ಟಿ ಸಮುದಾಯದ ಒಟ್ಟಾರೆ ಜನಸಂಖ್ಯೆ ಆಧರಿಸಿ ಬಡ್ತಿಯಲ್ಲಿ ಮೀಸಲು ಒದಗಿಸಬೇಕು ಎಂಬ



ಕೇಂದ್ರ ಸರ್ಕಾರದ ಕೋರಿಕೆಯನ್ನೂ ನ್ಯಾಯಾಲಯ ತಿರಸ್ಕರಿಸಿದೆ.

ಆದರೆ, 'ಎಸ್‌ಸಿ-ಎಸ್‌ಟಿ ಸಮುದಾಯದ ಹಿಂದುಳಿದಿರುವಿಕೆ ಪ್ರಮಾಣದ ಬಗ್ಗೆ ಬಡ್ತಿ ಮೀಸಲಿನ ವೇಳೆ ರಾಜ್ಯ ಸರ್ಕಾರಗಳು ದತ್ತಾಂಶವನ್ನು ಸಂಗ್ರಹಿಸುವ ಅಗತ್ಯವಿಲ್ಲ' ಎಂದು ಹೇಳಿದ್ದು, 2006ರಲ್ಲಿ ತಾನು ವಿಧಿಸಿದ್ದ 3 ಪ್ರಮುಖ ಷರತ್ತುಗಳ ಪೈಕಿ ಒಂದನ್ನು ಸಡಿಲಿಸಿದಂತಾಗಿದೆ. » 9

## ಒಬಿಸಿ ರೀತಿ ಎಸ್ಸಿ, ಎಸ್ಟಿಗೂ ಕೆನೆಪದರ

**ನವದೆಹಲಿ:** ಇತರ ಹಿಂದುಳಿದ ವರ್ಗಕ್ಕೆ (ಒಬಿಸಿ) ಅನ್ವಯವಾದಂತೆ ಎಸ್‌ಸಿ-ಎಸ್‌ಟಿ ಮೀಸಲಿನಲ್ಲೂ 'ಕೆನೆಪದರ' ಅನ್ವಯವಾಗುತ್ತದೆ ಎಂದು ಎಸ್ಸಿ, ಎಸ್ಟಿ ನೌಕರರ ಬಡ್ತಿ ಮೀಸಲು ಕುರಿತ ತೀರ್ಪು ಪ್ರಕಟಣೆ ವೇಳೆಯೇ ಸರ್ವೋಚ್ಚ ನ್ಯಾಯಾಲಯ ಸ್ಪಷ್ಟಪಡಿಸಿದೆ. ವಿವರ » 9

## ರಾಜ್ಯದಲ್ಲಿ ಬಡ್ತಿಗೆ ತೀರ್ಪು ಅನುಕೂಲ

**ಬೆಂಗಳೂರು:** ಎಸ್ಸಿ, ಎಸ್ಟಿ ನೌಕರರ ಬಡ್ತಿ ವೇಳೆ ದಕ್ಷತೆ, ಹಿಂದುಳಿದಿರುವಿಕೆ ಹಾಗೂ ಪ್ರಾತಿನಿಧ್ಯತೆ ಕೊರತೆ ಅಂಶ ಪರಿಗಣಿಸುವ ಅಗತ್ಯವಿಲ್ಲ ಎಂಬ ತೀರ್ಪು ಬಡ್ತಿ ಮೀಸಲಾತಿ ಪಡೆಯಲು ಮತ್ತಷ್ಟು ಅನುಕೂಲವಾಗಲಿದೆ ಎಂದು ಕಾನೂನು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ವಿವರ » 7

# ಬಡ್ತಿ ಮೀಸಲಿಗೆ ಸುಪ್ರೀಂ ಅಸ್ತು

27/9/18

ಮೊದಲ ಪುಟದಿಂದ

ಅಲ್ಲದೆ, ಬಡ್ತಿಯಲ್ಲಿ ಮೀಸಲು ನೀಡಿಕೆಯು ಆಯಾ ರಾಜ್ಯಗಳ ವಿವೇಚನೆಗೆ ಬಿಟ್ಟದ್ದಾಗಿದ್ದು, ಕಡ್ಡಾಯವೇನೂ ಅಲ್ಲ ಎಂದು ಹೇಳಿದೆ. ಹೀಗಾಗಿ ಇದು ರಾಜ್ಯಗಳಿಗೆ ಸಂಬಂಧಪಟ್ಟಿದ್ದಾಗಿದ್ದು, ನ್ಯಾಯಾಲಯ ವಿಧಿಸಿದ ಷರತ್ತುಗಳ ಅನ್ವಯ ಬಡ್ತಿ ಮೀಸಲು ನೀಡಲು ಹಸಿರು ನಿಶಾನೆ ದೊರಕಿದಂತಾಗಿದೆ. ಕರ್ನಾಟಕದಲ್ಲೂ ನನೆಗುದಿಗೆ ಬಿದ್ದಿದ್ದ ಬಡ್ತಿ ಮೀಸಲು ಪ್ರಕ್ರಿಯೆಗೆ ಈ ತೀರ್ಪು ಪುನರುಜ್ಜೀವ ನೀಡುವ ಸಾಧ್ಯತೆ ಇದೆ. ಮುಖ್ಯ ನ್ಯಾಯಾಧೀಶ ನ್ಯಾ। ದೀಪಕ್ ಮಿಶ್ರಾ, ನ್ಯಾ। ಕುರಿಯನ್ ಜೋಸೆಫ್, ನ್ಯಾ। ರೋಹಿಂಟನ್ ನಾರಿಮನ್, ನ್ಯಾ। ಸಂಜಯ್ ಕಿಶನ್ ಕೌಲ್, ನ್ಯಾ। ಇಂದೂ ಮಲ್ಹೋತ್ರಾ ಅವರನ್ನು ಒಳಗೊಂಡ ಪೀಠವು ಈ ಕುರಿತು ವಿಚಾರಣೆ ನಡೆಸಿ ಅಂತಿಮ ತೀರ್ಪು ಪ್ರಕಟಿಸಿತು.

ಆದರೆ ನ್ಯಾಯಪೀಠವು ಎಂ. ನಾಗರಾಜ ಪ್ರಕರಣದಲ್ಲಿ ನೀಡಿದ್ದ ತೀರ್ಪಿನಲ್ಲಿನ 'ಬಡ್ತಿ ಮೀಸಲು ನೀಡುವಾಗ ಎಸ್‌ಸಿ-ಎಸ್‌ಟಿ ಪ್ರಾತಿನಿಧ್ಯದ ಸಮರ್ಪಕತೆಯನ್ನು ಗಮನದಲ್ಲಿ ಇರಿಸಿಕೊಳ್ಳಬೇಕು' ಹಾಗೂ 'ಆಡಳಿತಾತ್ಮಕ ಕ್ಷಮತೆಗೆ ಇದರಿಂದ ಧಕ್ಕೆ ಬರಕೂಡದು' ಎಂಬ



ಇತರ 2 ಷರತ್ತುಗಳ ಬಗ್ಗೆ ಯಾವುದೇ ವಿಮರ್ಶೆ ಮಾಡಿಲ್ಲ.

2006ರಲ್ಲಿ ಸುಪ್ರೀಂ ಕೋರ್ಟ್‌ನ ಪಂಚ ಸದಸ್ಯ ಪೀಠವು ಎಂ. ನಾಗರಾಜ ಪ್ರಕರಣದಲ್ಲಿ ಎಸ್‌ಸಿ-ಎಸ್‌ಟಿ ಬಡ್ತಿ ಮೀಸಲಾತಿಗೆ ಈ ಮೇಲ್ಕಂಡ ಷರತ್ತುಗಳೂ ಸೇರಿ ಹಲವು ಷರತ್ತುಗಳನ್ನು ವಿಧಿಸಿತ್ತು. ಆದರೆ ಈ ಷರತ್ತುಗಳ ಕಾರಣ ಬಡ್ತಿಯಲ್ಲಿ ಮೀಸಲು ನೀಡಿಕೆಗೆ ತೊಂದರೆಯಾಗುತ್ತಿದ್ದು, ತೀರ್ಪನ್ನು ಸಪ್ತಸದಸ್ಯ ಪೀಠದಲ್ಲಿ ಪರಾಮರ್ಶೆಗೆ ಒಳಪಡಿಸಬೇಕು ಎಂದು ಕೇಂದ್ರ ಸರ್ಕಾರ ಸೇರಿದಂತೆ ಹಲವರು ಅರ್ಜಿ ಸಲ್ಲಿಸಿದ್ದರು. ಆ.30ರಂದೇ ವಿಚಾರಣೆ ಪೂರ್ತಿಗೊಳಿಸಿದ್ದ ಮುಖ್ಯ ನ್ಯಾಯಮೂರ್ತಿ ದೀಪಕ್ ಮಿಶ್ರಾ ನೇತೃತ್ವದ ಪಂಚಸದಸ್ಯ ಸಾಂವಿಧಾನಿಕ ಪೀಠ, ತೀರ್ಪು ಕಾಯ್ದಿರಿಸಿತ್ತು.

## 2006ರ ತೀರ್ಪು ಏನಿತ್ತು?

ಬಡ್ತಿ ಮೀಸಲು ನೀಡುವ ಮುನ್ನ ಎಸ್ಸಿ, ಎಸ್ಟಿ ಸಮುದಾಯದ ಹಿಂದುಳಿದಿರುವಿಕೆಯ ಪ್ರಮಾಣ ಕುರಿತಂತೆ ದತ್ತಾಂಶ ಒದಗಿಸಬೇಕು, ಆ ಸಮುದಾಯ ಸರ್ಕಾರಿ ಉದ್ಯೋಗಗಳಲ್ಲಿ ಪ್ರಾತಿನಿಧ್ಯ ಕೊರತೆ ಎದುರಿಸುತ್ತಿರುವ ಅಂಕಿ-ಅಂಶಗಳನ್ನು ನೀಡಬೇಕು, ಒಟ್ಟಾರೆ ಆಡಳಿತ ಕ್ಷಮತೆಯನ್ನು ಗಮನಿಸಬೇಕು ಎಂದು 2006ರಲ್ಲಿ ಎಂ. ನಾಗರಾಜ್ ಪ್ರಕರಣದಲ್ಲಿ ಸುಪ್ರೀಂಕೋರ್ಟ್‌ನ ಪಂಚ ಸದಸ್ಯ ಪೀಠ ಹೇಳಿತ್ತು.



ಇಂದಿನ ತೀರ್ಪು ಕೊಂಚ ಸ್ವಾಗತಾರ್ಹ. 2006ರ ತೀರ್ಪಿನಲ್ಲಿ ಬಡ್ತಿ ಮೀಸಲು ವೇಳೆ ದಲಿತರು ಮತ್ತು ಆದಿವಾಸಿಗಳ ಹಿಂದುಳಿದಿರುವಿಕೆ ಪ್ರಮಾಣವನ್ನು ಸಂಗ್ರಹಿಸಬೇಕು ಎಂದು ಷರತ್ತು ವಿಧಿಸಲಾಗಿತ್ತು. ಈ ಷರತ್ತನ್ನು ಈಗ ಸಡಿಲಿಸಲಾಗಿದೆ. ಇದರಿಂದಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಬಡ್ತಿ ಮೀಸಲು ನೀಡಲು ಅವಕಾಶ ಸಿಕ್ಕಂತಾಗಿದೆ. ಸರ್ಕಾರಗಳು ಇದನ್ನು ಗಂಭೀರವಾಗಿ ಪರಿಗಣಿಸಿ ಬಡ್ತಿ ಮೀಸಲು ಜಾರಿಗೊಳಿಸಬೇಕು.

• **ಮಾಯಾವತಿ**, ಬಿಎಸ್‌ಪಿ ನಾಯಕಿ